ಶ್ರೀ ಬಿ. ಬಸವಲಿಂಗಪ್ಪ. —ಅಧ್ಯಕ್ಷರೇ, ಇದಕ್ಕೆ ನಾನು ಏನು ಹೇಳಬೇಕು ?

ಅಧ್ಯಕ್ಷರು. —ನೀವಿಬ್ಬರೂ ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಏನು ಬೇಕಾದರೂ ಮಾತನಾಡುವುದಕ್ಕೆ ತಾವು ಅವಕಾಶ ಕೊಟ್ಟರೆ ಹೇಗೆ ?

ಅಧ್ಯಕ್ಷರು.—ಯಾರೂ ನಡುವೆ ಎದ್ದು ಇದ್ದಕ್ಕಿದ್ದ ಹಾಗೆ ಎದ್ದು ನಿಂತು ಮಾತನಾಡಬಾರದು.

(ಗೊಂದಲ)

ಸವಣೂರಿನಲ್ಲಿನ ಸರ್ಕಾರಿ ಆಸ್ಪತ್ರೆ

೧೪೫ (೫೦೨) ಶ್ರೀ ನೀಲಕಂಠಗಾವ ಪಾಟೀಲ್ (ಶಿಗ್ಗಾಂವ್).—ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸವಣೂರಿನಲ್ಲಿರುವ ಸರಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ವಿಚಾರ ಸರಕಾರ ದವರ ಗಮನದಲ್ಲಿದೆಯೇ ?

ಆ) ಸದರಿ ಆಸ್ಪತ್ರೆಯಲ್ಲಿ ಹಿರಿಯ ವೈದ್ಯಾಧಿಕಾರಿಗಳ ಸ್ಥಳ ಮತ್ತು ಇತರೇ ಮಹಿಳಾ ವೈದ್ಯಾಧಿಕಾರಿಗಳ ಸ್ಥಳ ಸುಮಾರು ಆರು ತಿಂಗಳಿಂದ ಖಾಲಿ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಖಾಲಿ ಸ್ಥಾನಗಳನ್ನು ಯಾವಾಗ ತುಂಬಲಾಗುವುದು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು), —

ಅ) ಇದೆ.

ಆ) 'ಎ' ದರ್ಜೆಯ ಕಿರಿಯ ಆರೋಗ್ಯ ಅಧಿಕಾರಿಗಳ ಹುದ್ದೆ ಖಾಲಿ ಇದೆ. ಒಬ್ಬ ಮಹಿಳಾ ವೈದ್ಯಾಧಿಕಾರಿಣಿಯು ಇಲ್ಲಿ ಕೆಲಸ ಮಾಡುತ್ತಿರುತ್ತಾರೆ. ಆದರೆ, ಗೈನಕಾಲಜಿಸ್ಟ್ ತಜ್ಞ ವೈದ್ಯರ ಹುದ್ದೆ ಖಾಲಿ ಇದೆ.

ಇ) ಸಾಧ್ಯವಾದಷ್ಟು ಶೀಘ್ರದಲ್ಲಿ

ಶ್ರೀ ನೀಲಕಂಠಗೌಡ ವೀರಣ್ಣಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಸವಣೂರಿನಲ್ಲಿರುವ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ ಎಂದು ಕೇಳಿರುವುದಕ್ಕೆ "ಹೌದು ಇದೆ" ಎಂದು ಹೇಳಿದ್ದಾರೆ. ಹಾಗಾದರೆ ಯಾವಾಗ ಮೇಲ್ದರ್ಜೆಗೆ ಏರಿಸುತ್ತೀರಿ ಎಂಬುದನ್ನು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಅಧ್ಯಕ್ಷರೇ, ಇದುವರೆಗೂ ಸವಣೂರು ಆಸ್ಪತ್ರೆ ೨೪ ಹಾಸಿಗೆಗಳುಳ್ಳ ಒಂದು ಆಸ್ಪತ್ರೆಯಾಗಿತ್ತು. ೩೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತನೆ ಮಾಡಬೇಕೆಂದು ಐ.ಪಿ.ಪಿ. ಯೋಜನೆ ಕೆಳಗೆ ಇದನ್ನು ಕೈಗೆತ್ತಿಕೊಂಡಿದ್ದೇವೆ.

ಶ್ರೀ ನೀಲಕಂಠಗೌಡ ವೀರಣ್ಣಗೌಡ ಪಾಟೀಲ್.—ನನ್ನ ಎರಡನೆಯ ಪ್ರಶ್ನೆ, ಡಿಪ್ಲೊಮಾ ಸರ್ಜನ್ಸ್ ಹುದ್ದೆಯು ಕಳೆದ ೬ ತಿಂಗಳಿಂದ ಖಾಲಿ ಇದೆ. ಈ ಪೋಸ್ಟನ್ನು ಯಾವಾಗ ತುಂಬಿಕೊಡುತ್ತೀರಿ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸ್ವಾಮಿ, ಅಲ್ಲಿ ಒಬ್ಬರು ಎ. ದರ್ಜೆ ನೌಕರರು ಇದ್ದದ್ದು ನಿಜ. ಅವರನ್ನು ಬೇರೆ ಕಡೆಗೆ ವರ್ಗ ಮಾಡಿದ್ದರಿಂದ ಆ ಜಾಗ ಖಾಲಿ ಇದೆ. ಇಂತಹ ಜಾಗಗಳನ್ನು ಭರ್ತಿ ಮಾಡಲು ಅರ್ಹರಾದಂತಹವರಿಗೆ ಬಡ್ತಿ ಕೊಟ್ಟು, ಅಲ್ಲಿನ ಖಾಲಿ ಜಾಗಕ್ಕೆ ನೇಮಕ ಮಾಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ತಯಾರಾಗತಕ್ಕಂಥ ಎಲ್ಲಾ ಕನ್ನಡ ಚಲನಚಿತ್ರಗಳಿಗೂ ಕೂಡಾ ಸಬ್ಸಿಡಿ ಕೊಡಲಾಗಿದೆ, ಕೊಡಲಾಗುತ್ತಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಸಾಹಿತ್ಯ ಇಲ್ಲ, ಕಲೆ ಇಲ್ಲ, ಕಥೆ ಇಲ್ಲ – ಇವುಗಳಿಲ್ಲದ ಕನ್ನಡ ಚಲನಚಿತ್ರಗಳೂ ಕೂಡಾ ಬೇಕಾದಷ್ಟು ಬರುತ್ತಿವೆ. ಈ ಚಿತ್ರಗಳಿಗೆ ಸಾರ್ವಜನಿಕರ ಹಣವನ್ನು ಕೊಡುವುದರಿಂದ, ಕನ್ನಡಕ್ಕಾಗಲೀ, ಕನ್ನಡ ಚಲನಚಿತ್ರರಂಗವಾಗಲೀ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದು ಒಂದು ಪ್ರಶ್ನೆ. ಎರಡನೆಯದು, ಸಬ್ಸಿಡಿ ಕೊಡುವಾಗ, ಸಾಮಾಜಿಕ

ಬದಲಾವಣೆಯ ಆಧಾರ, ಕರ್ನಾಟಕದ ಸಂತರು ಸಾಧುಗಳು, ಐತಿಹಾಸಿಕ ಘಟನೆಗಳು, ಚಾರಿತ್ರಿಕ ಘಟನೆಗಳು, ರಾಜಕೀಯ ಘಟನೆಗಳು, ಇದರ ಆಧಾರದ ಮೇಲೆ ನೀವು ಸಬ್ಸಿಡಿಯನ್ನು ಕನ್ನಡ ಚಲನಚಿತ್ರಗಳಿಗೆ ಕೊಟ್ಟರೆ. ಕರ್ನಾಟಕಕ್ಕೆ, ಕನ್ನಡ ಜನಕ್ಕೆ. ಇತಿಹಾಸಕ್ಕೆ, ಎಲ್ಲಾ ಕ್ಷೇತ್ರಕ್ಕೂ ಸಹಾಯ ವಾಗುತ್ತದೆ. ಈ ಚಿತ್ರಗಳಿಗೆ ಸಬ್ಸಿಡಿಯನ್ನು ಕೊಡುವುದಕ್ಕೆ ಏನಾದರೂ ಹೊಸ ನೀತಿಯನ್ನು ನಿಯಮಗಳನ್ನು ರಚನೆ ಮಾಡುತ್ತೀರಾ ? ಮತ್ತೆ. ಈ ಕಥೆಗಳನ್ನು ಯಾರು ತಯಾರು ಮಾಡುತ್ತಾರೆ, ಇದನ್ನು ಅಳತೆಗೋಲು ಹಾಕಿ ನೋಡಲಿಕ್ಕೆ. ಇವು ಸಬ್ಸಿಡಿ ಕೊಡಲಿಕ್ಕೆ ಅರ್ಹ ಇದೆಯೋ ಇಲ್ಲವೋ ಎನ್ನುವುದನ್ನು ನೋಡುವುದಕ್ಕೆ ಕಲಾವಿದರ ತಜ್ಞರ ಸಮಿತಿ ನೇಮಕ ಮಾಡಿತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈಗ ಒಂದು ಹೊಸ ಸೂಚನೆಯನ್ನು ಮಾನ್ಯ ಸದಸ್ಯರು ಮಾಡಿದ್ದಾರೆ,ಅದನ್ನು ನಾನು ಗಮನಿಸುತ್ತೇನೆ ಆದರೆ ಒಂದು ಮಾತು ಮಾನ್ಯ ಸದಸ್ಯರಿಗೂ ಕೂಡಾ ಗೊತ್ತುಂಟು. ಹೊಸ ನೀತಿಯನ್ನು ೧೯೭೫–೭೬ರಲ್ಲಿ ಜಾರಿಗೆ ತಂದಾಗ್ಗೆ ಕರ್ನಾಟಕದಲ್ಲಿ ತಯಾರಾಗತಕ್ಕಂಥ ಚಿತ್ರಗಳ ಸಂಖ್ಯೆ ಕೇವಲ ೧೫–೨೦ ಇದ್ದರೆ, ಈಗ ಪ್ರತಿವರ್ಷ ನೂರು ಚಿತ್ರಗಳು ತಯಾರಾಗುತ್ತಿವೆ. ಇದರ ಮುಖ್ಯವಾದ ಉದ್ದೇಶ, ಕರ್ನಾಟಕದಲ್ಲಿ ಈ ಒಂದು ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥ ತಜ್ಞರು ಇರಲಿ, ಕಲೆಗಾರರು ಇರಲಿ, ಆಥವಾ ನಟನಟಿಯರು ಇರಲಿ, ಅವರು ಬೇರೆ ಕಡೆಗೆ ಹೋಗಿ ಕಷ್ಟದಿಂದ ಅಲ್ಲಿಯ ಅಪಪಾನಕ್ಕೆ ತೊಂದರೆಗೆ ಒಳಪಟ್ಟು ಕಲಸ ಮಾಡತಕ್ಕಂಥ ಪ್ರಸಂಗ ಬರುತ್ತಿತ್ತು. ಅದು ಹೋಗಿ ಕರ್ನಾಟಕದಲ್ಲಿ ಬೆಂಗಳೂರಿನಲ್ಲಿ ಈ ಕೆಲಸ ಮಾಡಬೇಕು, ಚಿತ್ರ ತಯಾರು ಮಾಡಬೇಕು ಎಂಬುದು ಇದರ ಉದ್ದೇಶವಾಗಿದೆ. ಈ ಉದ್ದೇಶ ಈಗ ಸಫಲವಾಗಿದೆ.

(ಈ ಸಂದರ್ಭದಲ್ಲಿ ಶ್ರೀ ಸಿ. ಬೈರೇಗೌಡರೂ, ಶ್ರೀ ಜಿ. ನಾರಾಯಣಕುಮಾರ್ ಅವರು ಉಪಪ್ರಶ್ನೆಗಳನ್ನು ಕೇಳಲು ಎದ್ದುನಿಂತರು)

ಅಧ್ಯಕ್ಷರು.—ಮೂಲ ಪ್ರಶ್ನೆ ಅವರು ಹಾಕಿದ್ದಾರೆ. ಅವರು ಕೇಳಲಿ, ಬೈರೇಗೌಡರೇ ನೀವು ಕುಳಿತುಕೊಳ್ಳಿ, ಮಾನ್ಯ ನಾರಾಯಣಕುಮಾರ್ ನೀವು ಕುಳಿತುಕೊಳ್ಳಿ.

ಶ್ರೀ ವೇದಾಂತ ಹೆಬ್ಬಿಗೆ.—ಅಧ್ಯಕ್ಷರೇ, ಯಾವ ಹುರುಳೂ ಇಲ್ಲದಿರತಕ್ಕಂಥ ಕನ್ನಡ ಚಿತ್ರಗಳಿಗೆ ಒಂದು ಲಕ್ಷ, ಒಂದೂವರೆ ಲಕ್ಷ, ಎರಡು ಲಕ್ಷ, ಎರಡೂವರೆ ಲಕ್ಷ ಹಣ ಕೊಡುವ ಬದಲು, ಕರ್ನಾಟಕದಲ್ಲಿ ಸಾಮಿತ್ಯ ಕ್ಷೇತ್ರದಲ್ಲಿ, ರಾಜಕೀಯ ಕ್ಷೇತ್ರದಲ್ಲಿ ಮತ್ತು ಇನ್ನಾವುದೇ ಕ್ಷೇತ್ರದಲ್ಲಿ ಇವತ್ತು ಬದುಕಿರತಕ್ಕಂಥ ಹಿರಿಯರ ಬಗ್ಗೆ ಸಾಕ್ಷ್ಯ ಚಿತ್ರಗಳನ್ನು ತೆಗೆಯುವುದಕ್ಕೆ ಪೂರ್ಣವನ್ನು ಕೊಡುವುದರಿಂದ, ಕರ್ನಾಟಕದ ಜನತೆಗೆ ತಾವು ಸೇವೆ ಮಾಡಿದ ಹಾಗೆ ಆಗುವುದಿಲ್ಲವೇ, ಇದನ್ನು ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಸಾಕ್ಷ್ಯ ಚಿತ್ರಗಳನ್ನು ಸಂಬಂಧಪಟ್ಟ ಖಾತೆಯವರು ಸಹ ತಯಾರು ಮಾಡುತ್ತಾರೆ. ಅದಕ್ಕೆ ಬೇಕಾದಂಥ ಎಲ್ಲಾ ಸಾಮಗ್ರಿಗಳನ್ನು ಸಹ ಅವರು ಇಟ್ಟುಕೊಂಡಿದ್ದಾರೆ. ಇನ್ನು ಕೆಲವು ಸಾಕ್ಷ್ಯ ಚಿತ್ರಗಳನ್ನೇ ಬೇರೆಯವರು ತಯಾರು ಮಾಡಿದ್ದರೆ ಅಂತಹ ಸಾಕ್ಷಿ ಚಿತ್ರಗಳನ್ನು ಸಹ ಸರ್ಕಾರ ಕೊಂಡುಕೊಳ್ಳುತ್ತಿದೆ. ಆದ್ದರಿಂದ ಅವರಿಗೆ ಸಬ್ಸಿಡಿ ಕೊಡುವ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ದಯವಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ದಯವಮಾಡಿ ತಾವೆಲ್ಲಾ ಕುಳಿತುಕೊಳ್ಳಿ. ಇನ್ನೂ ದಿನದ ಪಟ್ಟಿಯಲ್ಲಿ ೧೧ ಪ್ರಶ್ನೆಗಳು ಇವೆ. ಎಲ್ಲಾ ಮಾನ್ಯ ಸದಸ್ಯರಿಗೂ ನಾನು ಅವಕಾಶ ಮಾಡಿಕೊಡಬೇಕಾಗಿದೆ. ಮೂಲ ಪ್ರಶ್ನೆಯನ್ನು ಯಾರು ಕೇಳಿರುತ್ತಾರೋ ಅವರಿಗೆ ಎರಡು ಸಾರಿ ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಮಾತ್ರ ಅವಕಾಶ ಕೊಟ್ಟಿದ್ದೇನೆ. ಆದ್ದರಿಂದ ದಯವಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ ಹಿಂದೆ ಬೇರೆಯವರಿಗೆ ಬೇಕಾದಷ್ಟು ಅವಕಾಶ ಕೊಟ್ಟಿದ್ದೀರಿ...

(ಗೊಂದಲ)

ಅಧ್ಯಕ್ಷರು.—ದಯವಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಬೈರೇಗೌಡರೇ ತಾವು ಮಂತ್ರಿಗಳಾಗಿ ಕೆಲಸ ಮಾಡಿದವರು...

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ದಯವಿಮಾಡಿ ಎಲ್ಲರೂ ಕುಳಿತುಕೊಳ್ಳಿ ಇನ್ನೂ ೧೧ ಪ್ರಶ್ನೆಗಳು ಇವೆ. ನಾನು ಎಲ್ಲರಿಗೂ ಅವಕಾಶ ಮಾಡಿ ಕೊಡಬೇಕಾಗಿದೆ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ ಕನ್ನಡ ಚಲನಚಿತ್ರದಲ್ಲಿ ಅನೇಕ ಜನ ವಿದ್ವಾಂಸರು, ಅನೇಕ ಜನ ಸಾಹಿತಿಗಳು.....

(ಗೊಂದಲ)

ಅಧ್ಯಕ್ಷರು.—ದಯವಿಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಕೌಜಲಗಿಯವರೇ ತಾವು ಪ್ರಶ್ನೆ ಕೇಳಿ.

ಸವದತ್ತಿ ತಾಲ್ಲೂಕಿನ ಮುರಗೋಡದಲ್ಲಿ ಬಸ್ಸು ನಿಲ್ದಾಣ

೧೪೭ (೪೦೬) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂಧೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕು ಮುರುಗೋಡು ಗ್ರಾಮದಲ್ಲಿ ಬಸ್ ನಿಲ್ದಾಣ ಕಟ್ಟಲು ಎಷ್ಟು ಹಣ ಮಂಜೂರು ಮಾಡಲಾಗಿದೆ. ೮೬-೮೭?

ಆ) ಬಸ್ ನಿಲ್ದಾಣ ಕಟ್ಟುವ ಕೆಲಸ ಪ್ರಾರಂಭವಾಗಿದೆಯೆ ?

ಇ) ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ?

ಈ) ಅದನ್ನು ಪೂರ್ಣಗೊಳಿಸಲು ಇನ್ನು ಎಷ್ಟು ದಿವಸಗಳು ಬೇಕು ?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂಧೀಖಾನೆ ರಾಜ್ಯ ಮಂತ್ರಿಗಳು).—

ಅ) ರೂ. ೬.೦೦ ಲಕ್ಷ

ಆ) ಇಲ್ಲ.

ಇ) ಮತ್ತು ಈ) ಉದ್ಭವಿಸುವುದಿಲ್ಲ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿರುವಂತೆ ೧೯೮೬-೮೭ನೇ ಸಾಲಿನಲ್ಲಿ ೬ ಲಕ್ಷ ರೂಪಾಯಿಗಳ ಹಣವನ್ನು ಒದಗಿಸಿದ್ದರೂ ಸಹ ಇದುವರೆವಿಗೂ ಕೆಲಸ ಪ್ರಾರಂಭಿಸಿಲ್ಲ ಮತ್ತು ಬಸ್ಸು ನಿಲ್ದಾಣವನ್ನು ಕಟ್ಟುವ ಸಲುವಾಗಿ ಸವದತ್ತಿ ತಾಲ್ಲೂಕು ಮುರುಗೋಡು ಗ್ರಾಮದಲ್ಲಿ ಸುಮಾರು ೯ ಗುಂಟೆ ಜಮೀನನ್ನು ಸಹ ಕೆ.ಎಸ್.ಆರ್.ಟಿ.ಸಿ ಪಕ್ಕೆ ತೆಗೆದುಕೊಂಡಿದ್ದಾರೆ. ಆದರೂ ಸಹ ಇದುವರೆವಿಗೂ ಇನ್ನೂ ಏತಕ್ಕೆ ಬಸ್ಸು ನಿಲ್ದಾಣವನ್ನು ಕಟ್ಟಿಲ್ಲ ?

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ ಹಾಗೆ ೧೯೮೬-೮೭ನೇ ಸಾಲಿನಲ್ಲಿ ೬ ಲಕ್ಷ ರೂಪಾಯಿಗಳ ಹಣವನ್ನು ಇಟ್ಟಿರುವುದು ನಿಜ. ಕೆ.ಎಸ್.ಆರ್.ಟಿ.ಸಿ.ಗೆ ೯ ಗುಂಟೆ ಜಮೀನನ್ನು ಸಹ ವಶಪಡಿಸಿಕೊಂಡಿರುವುದು ನಿಜ. ಆದರೆ ಅಲ್ಲಿನ ಸ್ಥಳೀಯ ಶಾಸಕರ ಒತ್ತಡದ ಮೇರೆಗೆ ಮತ್ತು ಸಾರ್ವಜನಿಕರ ಒತ್ತಡದ ಮೇರೆಗೆ ಇನ್ನೂ ದೊಡ್ಡ ಬಸ್ಸು ನಿಲ್ದಾಣವನ್ನು ಕಟ್ಟುವ ಸಲುವಾಗಿ ಒಂದು ಎಕರೆ ಜಮೀನು ಬೇಕಾಗುತ್ತದೆ. ಮಾನ್ಯ ಸದಸ್ಯರು ಒಂದು ಎಕರೆ ಜಮೀನನ್ನು ಕೆ.ಎಸ್.ಆರ್.ಟಿ.ಸಿ.ಗೆ ಕೊಡಿಸಿಕೊಡುವುದಾದರೆ ಇನ್ನು ೧೦-೧೫ ದಿವಸಗಳೊಳಗೆ ಆ ಕೆಲಸವನ್ನು ಪ್ರಾರಂಭಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ ಅಲ್ಲಿನ ಜನ ಒಂದು ಎಕರೆ ಜಮೀನನ್ನು ಕೊಡುವುದಕ್ಕೆ ತಯಾರಾಗಿದ್ದಾರೆ. ಆದ್ದರಿಂದ ಕೂಡಲೇ ಮಾನ್ಯ ಮಂತ್ರಿಗಳು ಈ ಕೆಲಸವನ್ನು ಪ್ರಾರಂಭಿಸುತ್ತಾರೆಯೇ ?

ಶ್ರೀ ವೀರಣ್ಣ.—ಆಗಲಿ.